"ಸರಿ ಹಾಗಿದ್ರೆ, ನಿನ್ನ ತಾಯಿ ವಿಷ್ಯ ಬಿಟ್ಹಾಕು. ಆಕೀ ಅನಿವಾರ್ಯತೆ ಏನಿತ್ತೋ. ಜನ ಸಾವ್ರ ಅಂತಾರ. ಒಂಟಿ ಹೆಂಗಸಿಗೆ ಆಪಾದನೆ ಬಹಳ. ನಿನ್ನ ಭವಿಷ್ಯ ನೀ ಕಟ್ಕೋಬೇಕಲ್ಲ. ನೀ ಜಾಣೆ ಹೌದಿಲ್ಲೋ. ಏಳು ಭಾಗೀರಥಿ ಇವತ್ತು ಮನೀಗ್ಹೋಗು."– ಮಾತು ಮುಗಿದಿರಲಿಲ್ಲ. ಭಾಗೀರಥಿ ಬಿಕ್ಕಳಿಸಿದಳು. ''ನಾ ಸಾಯ್ತೇನ್ರಿ ಬೇಕಾರ. ಮನೀಗ ಹೋಗಂಗಿಲ್ರಿ. ಬೇಕಾರ ನನ್ನ ಪೊಲೀಸ್ ಸ್ಟೇಷನ್ನಕ್ಕ ಒಯ್ಯರಿ ಮೇಡಂ, ನನ್ನಂಗ ಯಾರೂ ಇಲ್ಲದವರ್ನ ಉಳಿಸಿಕೊಳ್ಳಾಕ ಜಾಗೆ ಎಲ್ಲೂ ಇರಾಂಗಿಲ್ಲೇನ್ರೀ…'' ''ಇರತ್ತ, ಅದು ಆಮ್ಯಾಲೆ ನೀ ಯಾಕ ಏಕಾಏಕಿ ಮನೀಗ ಹೋಗಂಗಿಲ್ಲ ಅನ್ನಾದು.'' ''ಯಾಕಂದ್ರ, ನಮ್ಮವ್ವ ಇವತ್ತು ಮನ್ಯಾಗ ಇರಂಗಿಲ್ರಿ. ನಮ್ಮಣ್ಣ ನನ್ನ ಸುಮ್ನ ಬಿಡಾಂಗಿಲ್ರಿ.'' ''ಅವನಿಗೆ ನೀನು ಪ್ರೀತಿ ಮಾಡ್ತಿ ಅಂತ ಗೊತ್ತಾಗ್ಯದೇನು?'' "ನಂಗೊತ್ತಿಲ್ರಿ, ಅದಲ್ರಿ. ಅಂವ ನನ್ನ ಕೆಡಿಸಾಕ ಬರ್ತಾನ್ರಿ. ಭಾಳ ತೊಂದ್ರಿ ಕೊಡ್ತಾನ್ರಿ. ನಾ ಎಷ್ಟೋ ಸರ್ತೆ ಅಂವ್ನ ಕಡಿಯಿಂದ ತಪ್ಪಿಸಿಕೊಳಾಕ ರಾತ್ರಿಡೀ ನಮ್ಮ ಚಾಳದ ಪಾಯಖಾನಿಯಾಗ ಕುಂತೇನ್ರಿ. ಹೊರಗಿಂದ ಬಾಗ್ಲಾ ಹಾಕ್ಕೊಂಡು ಇಡೀ ರಾತ್ರಿ ಕಟ್ಟಿಮ್ಯಾಲ ಹೆದರಕೋತ ಕುಂತೇನ್ರಿ. ಬಾಜೂ ಮನಿ ಹುಡ್ಗಿ ಜೋಡಿ ಗೆಳೆತನಾ ಮಾಡ್ಕೊಂಡು ಆಕಿ ಮನ್ಯಾಗ ಮಲಗೇನ್ರಿ. ಆಕಿ ಊರಾಗಿಲ್ರಿ. ಅಂವಾ ನಿನ್ನೆ ಬೆದರಸ್ಯಾನ್ರಿ. ನಾಳಿ ರಾತ್ರಿ ನೋಡ್ಕತ್ತೇನಿ ಅಂತ…" ಭಾಗೀರಥಿ ಮತ್ತೂ ಮಾತಾಡುತ್ತಲೇ ಇದ್ದಳು. ದೃಢವಾಗಿ ತನ್ನೊಳಗಿನ ನೋವಿನ ಹೊರೆ ಇಳುಹದೇ ಉಸಿರಾಡಲೂ ಸಾಧ್ಯವಿಲ್ಲದ ತುರ್ತಿನಲ್ಲಿ. ಮಾಧವಿಗೆ ಗಂಟಲಾರಿತ್ತು. ಮಾತು ನಿಂತಿತ್ತು. ಮುಂದೇನು? ಎಂಬ ಪ್ರಶ್ನೆಯೊಂದೇ ಗಿರಕ್ಕನೇ ತಿರುಗುತ್ತಿತ್ತು. ಕೆಳಗಿನಿಂದ ವಾಚ್‌ಮನ್ ಕೂಗುತ್ತಿದ್ದ. ''ಮ್ಯಾಡಂನ್ನೋರೆ ಟೈಂ ಆಗೇದ್ರಿ. ಬರ್ರಲಾ.'' ಮಾಧವಿ ಮೇಡಂ ಎದ್ದು ನಿಂತಳು. ಎದುರು ಕೆಂಪಡರಿದ ಸೂರ್ಯನಿದ್ದ. ಆ ಕಿತ್ತಳೆಯ ಕಿರಣಗಳು ಭಾಗೀರಥಿಯನ್ನು ಮುಟ್ಟಿ ಮುಟ್ಟಿ ಸಾಂತ್ವನಿಸುತ್ತಿದ್ದವು. ಯಾಕೋ ಮಾಧವಿಗೆ ಎಳೆ ಕೂಸುಗಳ ಮೈಗೆ ಎಣ್ಣೆ ಸವರಿ, ಸೂರ್ಯ ಮುಟ್ಟಲಿ ಅಂತ ಅಂಗಳದಲ್ಲಿಡುತ್ತಿದ್ದುದು ನೆನಪಾಯಿತು. ಬದುಕಿನ ಬೆಳಗಷ್ಟೇ ಅಲ್ಲ ಸಂಜೆ ಕೂಡ ಎಷ್ಟು ಚೆಲುವಿಕೆಯದಾಗಬಹುದಲ್ಲವೇ? ಮಾಧವಿ ತನ್ನಿಡೀ ಬದುಕಿನಲ್ಲಿ ಮೊದಲ ಬಾರಿಗೆ ತುಂಬ ದೃಢವಾದ ನಿರ್ಧಾರ ಮಾಡಿದ್ದಳು. ಯಾರ ಸಲಹೆಗೂ ಕಾಯದೆ, ಎಂತಹ ಬಂಗಾರದ ಬೆಳಕದು. ಅವಳ ಬೆರಳ ತುದಿ ಭಾಗೀರಥಿಯ ಹಣೆಯ ಮೇಲಾಡಿ, ಮುಂಗುರುಳನ್ನು ಮುದ್ದಿಸಿತು. ''ನೀನು ನಿನ್ನ ಓದೆಲ್ಲ ಮುಗಿಯುವವರೆಗೂ, ಅನಂತರವೂ ನನ್ನೊಂದಿಗೆ ಇರ್ತೀಯಾ? ನನ್ನ ಮಗಳಾಗಿ?'' ಭಾಗೀರಥಿಗೆ ಮಾತು ತಿಳಿಯಲು, ತಿಳಿವು ಅರಗಲು ಒಂದಿಷ್ಟು ಹೊತ್ತೇ ಬೇಕಾಯ್ತು. ''ಮೊದ್ಲು ಪೊಲೀಸ್ ಸ್ಟೇಷನ್ನಿಗೆ ಹೋಗಿ, ನಿನ್ನ ಹೇಳಿಕೆ ಕೊಟ್ಟು ಹೋಗುವ ಬಾ''– ಮಾಧವಿ, ಭಾಗೀರಥಿ ಮೆಟ್ಟಿಲಿಳಿಯುತ್ತಿದ್ದರು. ತುಂಬ ಕಾಲ ಅಗಲಿದ್ದ ಜೀವಗಳು ಜನುಮ ಜಾತ್ರೆಯಲ್ಲಿ ಒಂದಾದ ಹಾಗೆ. ಭಾಗೀರಥಿಗಂತೂ ಇದೀಗ ನಡಿಗೆ ಕಲಿತ ಸಂಭ್ರಮ. ಬ್ಯಾಗು ಹೆಗಲಿಗೇರಿಸಿಕೊಂಡೇ, ಹುಡುಗಿಯೊಬ್ಬಳ ದುರಂತ ಪ್ರೇಮದ ಕಥೆ ಕೇಳುವ ತಯಾರಿಯಲ್ಲಿ ನಿಂತಿದ್ದ ದೊಡ್ಡವಾಡ ಸರ್‌ಗೆ, ಮಾಧವಿ ಮೇಡಂ ಮುಖದ ಅಪರೂಪದ ಕಾಂತಿಯನ್ನು ನೋಡಿ, ಏನನ್ನಲೂ ತಿಳಿಯದೆ ಬಿಟ್ಟ ಬಾಯಿ ಬಿಟ್ಟಂತೆಯೇ ನಿಂತಿದ್ದರು.

## ವಿನಯಾ ಒಕ್ಕುಂದ

ಸರ್ಕಾರಿ ಕಾಲೇಜಿನ ಅಧ್ಯಾಪಕಿ ವಿನಯಾ ಧಾರವಾಡದಲ್ಲಿ ನೆಲೆಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸ್ತ್ರೀ ನೋಟದ ಮೂಲಕ ಸೂಕ್ಷ್ಮವಾಗಿ ಚಿತ್ರಿಸುವ ಅವರು, 'ಬಾಯಾರಿಕೆ', 'ನೂರು ಗೋರಿಯ ದೀಪ', 'ಹಸಬಿ' ಎಂಬ ಕವಿತೆಯ ಸಂಗ್ರಹಗಳನ್ನು, 'ಊರ ಒಳಗಣ ಬಯಲು', 'ಉರಿ' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.